ಕರ್ನಾಟಕ ವಿಧಾನ ಪರಿಷತ್

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	44(10)
2.	ಮಾನ್ಯ ಸದಸ್ಯರ ಹೆಸರು	ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)
3.	ಉತ್ತರಿಸಬೇಕಾದ ದಿನಾಂಕ	02/03/2020
4.	ಉತ್ತರಿಸುವವರು	ಕಾರ್ಮಿಕ ಮತ್ತು ಸಕ್ಕರೆ ಸಚಿವರು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ಅಸಂಘಟಿತ ಕಾರ್ಮಿಕರ ಭದ್ರತಾ ಮಂಡಳಿಯಲ್ಲಿ ಖಾಸಗಿ ವಾಣಿಜ್ಯ ವಾಹನ ಚಾಲಕರು ಮೃತಪಟ್ಟರೆ ಅವರುಗಳಿಗೆ ನೀಡುತ್ತಿರುವ ಪರಿಹಾರಧನ ಎಷ್ಟು;</td><td>ಖಾಸಗಿ ವಾಣಿಜ್ಯ ವಾಹನ ಚಾಲಕರು ಅಪಘಾತದಿಂದ ಮೃತಪಟ್ಟರೆ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಕರ್ನಾಟಕ ರಾಜ್ಯ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ ದೊರಕುವ ಅಪಘಾತ ಪರಿಹಾರ ಸೌಲಭ್ಯಗಳು ಈ ಕೆಳಗಿನಂತಿವೆ:-

• ಅಪಘಾತದಿಂದ ಚಾಲಕರು ಮೃತಪಟ್ಟರೆ ಅವರ ನಾಮನಿರ್ದೇಶಿತರಿಗೆ ರೂ. 5 ಲಕ್ಷ ಪರಿಹಾರ.
• ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಾಗ, ಫಲಾನುಭವಿಗೆ ದುರ್ಬಲತೆಯ ಪ್ರಮಾಣಕ್ಕನುಗುಣವಾಗಿ ರೂ.2 ಲಕ್ಷದವರೆಗೆ ಪರಿಹಾರ.
• ಅಪಘಾತದಿಂದ ತಾತ್ಕಾಲಿಕ ದುರ್ಬಲತೆ ಹೊಂದಿದಾಗ-
  ➢ ಅಪಘಾತಕೊಳ್ಳಗಾಗಿ ಆಸ್ಪತ್ರೆಯಲ್ಲಿ 15 ದಿನಗಳಿಗಿಂತ ಕಡಿಮೆ ಅವಧಿಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ, ಗರಿಷ್ಠ ರೂ. 50,000/- ರವರೆಗೆ ಅಥವಾ ನಿಖರ ಆಸ್ಪತ್ರೆ ವೆಚ್ಚ, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಹಾಗೂ
  ➢ 15 ದಿನಗಳಿಗಿಂತ ಹೆಚ್ಚು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ, ಗರಿಷ್ಠ ರೂ. 1 ಲಕ್ಷದ ವರೆಗೆ ಅಥವಾ ನಿಖರ ಆಸ್ಪತ್ರೆ ವೆಚ್ಚ, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಮರುಪಾವತಿ ಪಡೆಯಬಹುದು.</td></tr>
<tr><td>ಆ)</td><td>ಕಳೆದ 3 ವರ್ಷಗಳಿಂದ ಎಷ್ಟು ವಾಹನ ಚಾಲಕರಿಗೆ ಪರಿಹಾರ ಧನ ವಿತರಿಸಲಾಗಿದೆ; (ವಿವರ ನೀಡುವುದು)</td><td>ಕಳೆದ 3 ವರ್ಷಗಳಿಂದ ಅಪಘಾತ ಪ್ರಕರಣಗಳಲ್ಲಿ ಯೋಜನೆಯಡಿ ವಿತರಿಸಿದ ವಾಹನ ಚಾಲಕರಿಗೆ/ನಾಮನಿರ್ದೇಶಿತರಿಗೆ ವಿತರಿಸಿರುವ ಪರಿಹಾರದ ವಿವರ ಈ ಕೆಳಗಿನಂತಿದೆ.

<table>
<tr><th>ಕ್ರ ಸಂ.</th><th>ವಿವರಣೆ</th><th>ಪ್ರಕರಣ</th><th>ಪರಿಹಾರದ ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>ಮರಣ</td><td>247</td><td>9,85,50,000/-</td></tr>
<tr><td>2</td><td>ಶಾಶ್ವತ ದುರ್ಬಲತೆ</td><td>37</td><td>16,29,120/-</td></tr>
<tr><td>3</td><td>ಆಸ್ಪತ್ರೆ ವೆಚ್ಚದ ಮರುಪಾವತಿ/ತಾತ್ಕಾಲಿಕ ದುರ್ಬಲತೆ</td><td>3</td><td>4,40,000/-</td></tr>
<tr><td colspan="2">ಒಟ್ಟು</td><td>287</td><td>10,06,19,120/-</td></tr>
</table></td></tr>
</table>

ಇ-ಆಫೀಸ್ ಕಾಇ 61 ಎಲ್ಇಟಿ 2020

27/2/

(ಅರೆಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಸಚಿವರು